2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 165/2021

| | | |
|---|---|---|
| ಸಾಕ್ಷಿದಾರರ ಹೆಸರು | - ರಮೇಶ್ | ಪಿಡಬ್ಲೂ -6 |
| ತಂದೆಯ ಹೆಸರು | - ಓಂಕಾರಪ್ಪ | ಸಿಡಬ್ಲೂ -12 |
| ವಯಸ್ಸು | - 45 ವರ್ಷ | |
| ಉದ್ಯೋಗ | - ಪೇಂಟಿಂಗ್ ಕೆಲಸ | |
| ವಾಸ ಸ್ಥಳ | - ಹಿರೇಗರ್ಜೆ, ಕಡೂರು ತಾಲ್ಲೂಕು | |

ದಿನಾಂಕಃ 24.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ನಾನು ಈ ಹಿಂದೆ ಮೊದಲ ಬಾರಿಗೆ ಕಡೂರು ಪೊಲೀಸ್ ಠಾಣೆಯಲ್ಲಿ ನೋಡಿದ್ದೇನೆ. ಪ್ರಾಸಾ.1 ನನ್ನ ಹೆಂಡತಿಯ ತಂಗಿ. ಮೃತ ಪ್ರಕಾಶ್ ಗೊತ್ತು ಆತ ಪ್ರಾಸಾ.1 ರವರ ಗಂಡ. ಚಾಸಾ.7 ಮೃತನ ತಂದೆ. ಸಹ ಪಂಚನಾದ ಚಾಸಾ.13 ರವರು ಗೊತ್ತು.

2. ದಿನಾಂಕ 20.07.2021 ರಂದು ನಾನು ನಮ್ಮ ಊರಾದ ಹಿರೇಗರ್ಜೆಯಲ್ಲಿ ಇದ್ದೆನು. ಆ ದಿನ ಬೆಳಿಗ್ಗೆ 7.45 ರಿಂದ 8.00 ಗಂಟೆ ಸಮಯಕ್ಕೆ ಕಡೂರು ಪೊಲೀಸ್ ಠಾಣೆಯಿಂದ ನನಗೆ ಕರೆ ಬಂದಿತ್ತು. ಪ್ರಾಸಾ.1 ರವರ ಗಂಡನಾದ ಪ್ರಕಾಶ್ ನ ಸಾವಿಗೆ ಸಂಬಂಧಿಸಿದಂತೆ ಆರೋಪಿಗಳು ಏನನ್ನೋ ಕೊಡುವುದಾಗಿ ಹೇಳಿ ಆ ಬಗ್ಗೆ ಮಹಜರ್ ಜರುಗಿಸಲು ಠಾಣೆಗೆ ಬರುವಂತೆ ಹೇಳಿ ನನ್ನನ್ನು ಕರೆದರು. ಅದರಂತೆ ನಾನು ಬೆಳಿಗ್ಗೆ 8.45 ಗಂಟೆಗೆ ನಾನು ಠಾಣೆಗೆ ಹೋದೆನು. ಅಲ್ಲಿ ಆರೋಪಿತರು ಇದ್ದರು ಮತ್ತು ಚಾಸಾ.13 ಶ್ರೀಧರ್ ರವರು ಸಹ ಅಲ್ಲಿಗೆ ಬಂದಿದ್ದರು.

ನಂತರ ಪೊಲೀಸರು 1 ನೇ ಆರೋಪಿಯನ್ನು ಕುರಿತು ವಿಚಾರಿಸಿದರು. ಆಗ ಆತ ತನ್ನ ಹೆಸರು ಶಬ್ಬೀರ್ ಎಂದು ಮತ್ತು ಎರಡನೇ ಆರೋಪಿಯನ್ನು ತೋರಿಸಿ ಆತ ತನ್ನ ತಂದೆ ಎಂದು ತಿಳಿಸಿದನು.

3. ನಂತರ ಆರೋಪಿತರನ್ನು ಕುರಿತು ಪೊಲೀಸರು ಪ್ರಕಾಶನ ಸಾವಿನ ಬಗ್ಗೆ ವಿಚಾರಿಸಿದರು. ಆಗ 1 ನೇ ಆರೋಪಿ ದಿನಾಂಕ 14.07.2021 ರಂದು ಬಸವೇಶ್ವರ ಸರ್ಕಲ್ ನಲ್ಲಿದ್ದ ಪ್ರಕಾಶ್ ರವರ ಆಟೋವನ್ನು ನಂಜಪ್ಪನಹಳ್ಳಿಗೆ ಹೋಗಲು ಬಾಡಿಗೆಗೆ ಆರೋಪಿತರು ಮಾತನಾಡಿದ್ದಾಗಿ ಮತ್ತು ಅದರಂತೆ ಪ್ರಕಾಶ್ ರವರು ಅದಕ್ಕೆ ಒಪ್ಪಿಕೊಂಡಿದ್ದಾಗಿ ನಂತರ ಅಲ್ಲಿಂದ ಹೊರಟಿದ್ದಾಗಿ ಮಧ್ಯದಲ್ಲಿ ಮದ್ಯವನ್ನು ಖರೀದಿಸಿ ನಿರ್ಜನ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಆಟೋವನ್ನು ನಿಲ್ಲಿಸಿ ಅಲ್ಲಿ ಆರೋಪಿತರು ಮದ್ಯಪಾನವನ್ನು ಮಾಡಿದ್ದಾಗಿ ಮತ್ತು ಅವರು ಪ್ರಕಾಶನಿಗೂ ಸಹ ಮದ್ಯವನ್ನು ಕುಡಿಸಿದ್ದಾಗಿ ನಂತರ ಪ್ರಕಾಶನ ಕುತ್ತಿಗೆಯನ್ನು ಹಗ್ಗದಿಂದ ಬಿಗಿದು ಕೊಲೆ ಮಾಡಿ ಆತನ ಶವವನ್ನು ಆತನ ಆಟೋದಲ್ಲಿಯೇ ಹಾಕಿಕೊಂಡು ಹೇಮಗಿರಿ ಗುಡ್ಡದ ಹತ್ತಿರ ಕರೆದುಕೊಂಡು ಹೋಗಿ ಅದರ ಪಕ್ಕದಲ್ಲಿರುವ ಕೆರೆಯ ಏರಿಯ ಮೇಲಿನಿಂದ ಪ್ರಕಾಶನ ಶವವನ್ನು ಕೆಳಗೆ ತಳ್ಳಿದ್ದಾಗಿ ನಂತರ ಆಟೋವನ್ನು ತೆಗೆದುಕೊಂಡು ಚಿಕ್ಕಮಗಳೂರಿಗೆ ಹೋಗಿದ್ದಾಗಿ 1 ನೇ ಆರೋಪಿ ನನ್ನ ಸಮಕ್ಷಮ ಪೊಲೀಸರಿಗೆ ತಿಳಿಸಿದನು. ಸದರಿ ಆಟೋದಲ್ಲಿ ಒಂದು ಏರಟೆಲ್ ಕಂಪೆನಿಗೆ ಸೇರಿದ ಸಿಮ್ ಕಾರ್ಡ್ 1 ನೇ ಆರೋಪಿಗೆ ಸಿಕ್ಕಿದ್ದಾಗಿ ಅದನ್ನು ತಾನು ಖರೀದಿಸಿದ್ದ

ಸೆಕೆಂಡ್ ಹ್ಯಾಂಡ್ ವಿವೋ ಕಂಪೆನಿಗೆ ಸೇರಿದ ಮೊಬೈಲ್ ಗೆ ಹಾಕಿಕೊಂಡಿದ್ದಾಗಿ ನುಡಿದು ಆತ ತನ್ನ ಬಳಿ ಇದ್ದ ಸದರಿ ಮೊಬೈಲನ್ನು ಪೊಲೀಸರಿಗೆ ನಮ್ಮ ಸಮಕ್ಷಮ ಹಾಜರುಪಡಿಸಿರುತ್ತಾನೆ.

4. ನಾನು ಸದರಿ ಮೊಬೈಲನ್ನು ನೋಡಿರುತ್ತೇನೆ. ಸದರಿ ಮೊಬೈಲ್ ಲಾಕ್ ಆಗಿದ್ದು ಅದನ್ನು 1 ನೇ ಆರೋಪಿಯ ಮೂಲಕ ಪೊಲೀಸರು ತೆಗೆಸಿ ಅದರಲ್ಲಿದ್ದ ಏರೆಟೆಲ್ ಕಂಪೆನಿಗೆ ಸೇರಿದ ಸಿಮ್ ಕಾರ್ಡನ್ನು ತೆಗೆದು ನಂತರ ಮೊಬೈಲನ್ನು ಏರೋಪ್ಲೇನ್ ಮೋಡಿಗೆ ಹಾಕಿ ಸದರಿ ಸಿಮ್ ಕಾರ್ಡ್ ಮತ್ತು ಮೊಬೈಲನ್ನು ಒಂದು ಕವರ್ ನಲ್ಲಿ ಹಾಕಿ ಪ್ಯಾಕ್ ಮಾಡಿ ನಮ್ಮ ಸಹಿಗಳನ್ನು ಪಡೆದುಕೊಂಡು ಪೊಲೀಸರು ಅದನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಸದರಿ ಸಿಮ್ ಕಾರ್ಡಿನ ಸಂಖ್ಯೆ ನನಗೆ ನೆನಪಾಗುತ್ತಿಲ್ಲ.

5. ನಂತರ 1 ನೇ ಆರೋಪಿ ತಾನು ಧರಿಸಿದ್ದ ಬಟ್ಟೆಗಳನ್ನು ಪೊಲೀಸರಿಗೆ ತೋರಿಸಿ ಅವುಗಳನ್ನು ತಾನು ದಿನಾಂಕ 14.07.2021 ರಂದು ಕೃತ್ಯವೆಸಗಿದ ಸಮಯದಲ್ಲಿ ಧರಿಸಿದ್ದಾಗಿ ನುಡಿದನು. ನಂತರ ಪೊಲೀಸರು ಆತನಿಗೆ ಧರಿಸಲು ಬೇರೆ ಬಟ್ಟೆಗಳನ್ನು ನೀಡಿ ಆತ ಧರಿಸಿದ್ದ ಬಟ್ಟೆಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು.

6. ಆ ರೀತಿ 1 ನೇ ಆರೋಪಿ ಹಾಜರುಪಡಿಸಿದ ಬಟ್ಟೆಗಳು ಒಂದು ಕೆಂಪು ಬಣ್ಣದ ತುಂಬು ತೋಳಿನ ಶರ್ಟಾಗಿತ್ತು, ಒಂದು ಕಡು ನೀಲಿ ಬಣ್ಣದ ಜರ್ಕಿನ್ ಆಗಿತ್ತು. ಸದರಿ ಶರ್ಟು ಮತ್ತು

ಜರ್ಕಿನನ್ನು ಪೊಲೀಸರು ಪ್ರತ್ಯೇಕವಾಗಿ ಬಟ್ಟೆಯಲ್ಲಿ ಹಾಕಿ ಹೊಲೆದು ಪ್ಯಾಕ್ ಮಾಡಿಕೊಂಡು ಅವುಗಳ ಮೇಲೆ ನನ್ನ ಸಹಿಗಳನ್ನು ಪಡೆದುಕೊಂಡರು. ಆ ಬಗ್ಗೆ ಬೆಳಿಗ್ಗೆ 9.00 ಗಂಟೆಯಿಂದ 9.30 ಗಂಟೆಯವರೆಗೆ ಪೊಲೀಸರು ಪಂಚನಾಮೆಯನ್ನು ಜರುಗಿಸಿದರು.

7. ಸದರಿ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪಂಚನಾಮೆಯನ್ನು ನಿಪಿ.15 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.15(ಎ) ಎಂದು ಗುರುತಿಸಲಾಯಿತು.

8. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿ ಅದನ್ನು ಪೊಲೀಸರು ಪಂಚನಾಮೆಯನ್ನು ಜರುಗಿಸಲು ಸಹಕರಿಸುವಂತೆ ನೀಡಿದ ನೋಟೀಸು ಎಂದು ನುಡಿದಿರುತ್ತಾರೆ. ಸದರಿ ನೋಟೀಸನ್ನು ನಿಪಿ.16 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.16(ಎ) ಎಂದು ಗುರುತಿಸಲಾಯಿತು.

9. ಸದರಿ ನೋಟೀಸು ಮತ್ತು ಪಂಚನಾಮೆಗೆ ಚಾಸಾ.13 ಶ್ರೀಧರ್ ರವರು ಸಹ ಸಹಿ ಮಾಡಿದ್ದಾರೆ. ಮೇಲೆ ಹೇಳಿದಂತೆ ಪಂಚನಾಮೆಯ ಕಾಲಕ್ಕೆ ಪೊಲೀಸರು 1 ನೇ ಆರೋಪಿಯಿಂದ ವಶಪಡಿಸಿಕೊಂಡ ಮೊಬೈಲ್, ಸಿಮ್ ಕಾರ್ಡ್ ಮತ್ತು ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ.

10. ಸದರಿ ವಸ್ತುಗಳು ಇವೆ ಎಂದು ಹೇಳಿ ಪ್ಯಾಕ್ ಮಾಡಿ ಸೀಲು ಮಾಡಲಾಗಿದ್ದ ವಸ್ತುಗಳನ್ನು ಈ ದಿನ ನ್ಯಾಯಾಲಯದಲ್ಲಿ ಆರೋಪಿತರ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಒಂದು ವೀವ್ರೋ ಕಂಪೆನಿಗೆ ಸೇರಿದ ಆ್ಯಂಡ್ರ್ಯಾಯ್ಡ್ ಮೊಬೈಲ್ ಮತ್ತು ಅದರೊಳಗೆ ಇದ್ದ ಏರ್ ಟೆಲ್ ಕಂಪೆನಿಗೆ ಸೇರಿದ ಸಿಮ್ ಕಾರ್ಡನ್ನು ನೋಡಿ ಗುರುತಿಸಿ ಆ ದಿನ 1 ನೇ ಆರೋಪಿಯಿಂದ ಪೊಲೀಸರು ವಶಪಡಿಸಿಕೊಂಡ ಮೊಬೈಲ್ ಮತ್ತು ಸಿಮ್ ಕಾರ್ಡ್ ಅದೇ ಎಂದು ನುಡಿದ ಮೇರೆಗೆ ಸದರಿ ಮೊಬೈಲ್ ಮತ್ತು ಸಿಮ್ ಕಾರ್ಡನ್ನು ಒಟ್ಟಾಗಿ ಮು.ಮಾ.10 ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.10 ರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ.10(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದು ಕೆಂಪು ಬಣ್ಣದ ತುಂಬು ತೋಳಿನ ಶರ್ಟು ಮತ್ತು ಒಂದು ಕಡು ನೀಲಿ ಬಣ್ಣದ ಜರ್ಕಿನನ್ನು ನೋಡಿ ಗುರುತಿಸಿ ಆ ದಿನ 1 ನೇ ಆರೋಪಿ ಧರಿಸಿದ್ದ ಮತ್ತು ಪೊಲೀಸರಿಗೆ ಹಾಜರುಪಡಿಸಿದ ಬಟ್ಟೆಗಳು ಅವೇ ಎಂದು ನುಡಿದಿರುತ್ತಾರೆ. ಒಂದು ಕೆಂಪು ಬಣ್ಣದ ತುಂಬು ತೋಳಿನ ಶರ್ಟು ಮತ್ತು ಒಂದು ಕಡು ನೀಲಿ ಬಣ್ಣದ ಜರ್ಕಿನನ್ನು ಕ್ರಮವಾಗಿ ಮು.ಮಾ.11 ಮತ್ತು ಮು.ಮಾ.12 ಎಂದು ಗುರುತಿಲಾಯಿತು.

11. ಸಾಕ್ಷಿಯು ಮು.ಮಾ.11 ಮತ್ತು ಮು.ಮಾ.12 ರ ಮೇಲೆ ಅಂಟಿಸಲಾಗಿರುವ ಚೀಟಿಗಳಲ್ಲಿರುವ ತನ್ನ ಸಹಿಗಳನ್ನು

ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮು.ಮಾ.11(ಎ) ಮತ್ತು ಮು.ಮಾ.12(ಎ) ಎಂದು ಗುರುತಿಸಲಾಯಿತು.

12. ಸಾಕ್ಷಿಗೆ ಮೂರು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.17 ರಿಂದ ನಿಪಿ.19 ಎಂದು ಗುರುತಿಸಲಾಯಿತು. ಸದರಿ ಫೋಟೋಗಳನ್ನು ಮೇಲೆ ಹೇಳಿದಂತೆ ಪೊಲೀಸರು ಪಂಚನಾಮೆಯನ್ನು ಜರುಗಿಸುವ ಸಮಯದಲ್ಲಿ ತೆಗೆದುಕೊಂಡಿರುತ್ತಾರೆ. ನಿಪಿ.17 ಮತ್ತು ನಿಪಿ.18 ಫೋಟೋಗಳಲ್ಲಿ ನನ್ನೊಂದಿಗೆ ಚಾಸಾ.13 ಶ್ರೀಧರ, 1 ನೇ ಆರೋಪಿ ಶಬ್ಬೀರ್ ಮತ್ತು ಪೊಲೀಸರು ಇದ್ದಾರೆ. ನಿಪಿ.19 ಫೋಟೋದಲ್ಲಿ ನನ್ನೊಂದಿಗೆ ಚಾಸಾ.13 ಶ್ರೀಧರ, 1 ನೇ ಆರೋಪಿ ಶಬ್ಬೀರ್, 2 ನೇ ಆರೋಪಿ ಮತ್ತು ಪೊಲೀಸರು ಇದ್ದಾರೆ.

<u>ಪಾಟೀ ಸವಾಲುಃ</u>

(ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ
ಹೆಚ್